**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 31/2015 ಅಸಾ.6**

**ಚಾಸಾ.6**

| | | |
|---|---|---|
| ಸಾಕ್ಷಿದಾರರ ಹೆಸರು | - | ರಮೇಶ್ |
| ತಂದೆಯ ಹೆಸರು | - | ಬಾಡು |
| ವಯಸ್ಸು | - | 43 ವರ್ಷ |
| ಉದ್ಯೋಗ | - | ಹೋಂ ಗಾರ್ಡ್, |
| ವಿಳಾಸ | - | ಕಿನ್ನಿಮೂಲ್ಕಿ |

ದಿನಾಂಕಃ 16.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:**

ನಾನು 2014 ನೇ ಸಾಲಿನಿಂದ ಉಡುಪಿ ನಗರ ಠಾಣೆಯಲ್ಲಿ ಹೋಂ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕೇಸಿನ ಪಿರ್ಯಾದುದಾರರಾದ ವಿಶ್ವನಾಥ ಇವರ ಪರಿಚಯ ಇದ್ದು ಅವರು 2014 ನೇ ಸಾಲಿನಲ್ಲಿ ಉಡುಪಿ ನಗರ ಠಾಣೆಯಲ್ಲಿ ಪೋಲಿಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸುಮಾರು 10 ವರ್ಷಗಳ ಹಿಂದೆ ಒಮ್ಮೆ ನನ್ನನ್ನು ಮತ್ತು ಪಿರ್ಯಾದುದಾರರನ್ನು ರಾತ್ರಿ ಗಸ್ತಿಗಾಗಿ ನಗರ ಠಾಣೆಯಿಂದ ಕರ್ತವ್ಯಕ್ಕೆ ನೇಮಿಸಿದ್ದರು. ರಾತ್ರಿ ಸುಮಾರು 10-00 ಗಂಟೆಗೆ ನಾವು ಉಡುಪಿಯ ಡಯಾನಾ ಟಾಕೀಸ್ ಬಳಿ ಗಸ್ತು ಸಂಚರಿಸುತ್ತಿದ್ದಾಗ, ಎಸ್.ಪಿ. ಕಚೇರಿಯಿಂದ ನಿಸ್ತಂತು ಸಂದೇಶದ ಮುಖಾಂತರ ಒಂದು ವಾಹನದಲ್ಲಿ ದನಗಳನ್ನು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ರಾತ್ರಿ 1-00 ಗಂಟೆ ಸುಮಾರಿಗೆ ಒಂದು ವಾಹನ ಬರುತ್ತಿದ್ದು, ಸದ್ರಿ ವಾಹನವನ್ನು ನಾವು ದಾರಿ ದೀಪದ ಬೆಳಕಿನಲ್ಲಿ ನೋಡಿದಾಗ ವಾಹನದಲ್ಲಿ ಸುಮಾರು ನಾಲ್ಕು ಜನರು ಇದ್ದು ದನ ಇರುವುದು ಕಂಡುಬಂತು. ವಾಹನವನ್ನು ನೋಡಿದ ನಾವು ವಾಹನವನ್ನು ನಿಲ್ಲಿಸಲು ಸೂಚಿಸಿದಾಗ ಸದ್ರಿ ವಾಹನವನ್ನು ನಮ್ಮ ಮೇಲೆ ಹಾಯಿಸಲು ಬಂದಿದ್ದು ಆಗ ನಾವು ಹಾರಿ ತಪ್ಪಿಸಿಕೊಂಡೆವು. ವಾಹನದಲ್ಲಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ

ಮೂರನೇ ಆರೋಪಿ ಮತ್ತು ವಿ.ಸಿ. ಮೂಲಕ ಆರೋಪಿ-1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ. ಕಾರನ್ನು ನೋಡಿದಲ್ಲಿ ಗುರುತಿಸುತ್ತೇನೆ. ಸ್ರದ್ರಿ ಕಾರನ್ನು ನೋಡಿ ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರ ತಕರಾರು ಇರುವುದಿಲ್ಲ. ಆರೋಪಿತರು ಈ ಹಿಂದೆ ಪೋಲಿಸ್ ಠಾಣೆಯಲ್ಲಿ ನೋಡಿದ್ದೇನೆ.

**<u>ಪಾಟಿ ಸವಾಲುಃ ಆರೋಪಿ-2 ಮತ್ತು 3 ರವರ ಪರ ಶ್ರೀ ಎ.ಆರ್.ಆರ್.ವಕೀಲರಿಂದಃ</u>**

ಆ ದಿನ ನಾನು ಚಾಸಾ1 ರವರ ಬೈಕ್ ನಲ್ಲಿ ಹೋಗಿದ್ದೆನು. ನಾವು ಡಯಾನಾ ಟಾಕೀಸ್ ನಿಂದ ಚಿಟ್ಪಾಡಿ ಕಡೆಗೆ ಬರುತ್ತಿದ್ದೆವು. ವಾಹನ ಡಯಾನಾ ಟಾಕೀಸ್ ನ ಹಿಂಬದಿ ರಸ್ತೆಯಿಂದ ಬರುತ್ತಿತ್ತು. ಸ್ರದ್ರಿ ರಸ್ತೆ ಬೈಲೂರಿಗೆ ಸೇರುವ ರಸ್ತೆ ಎನ್ನುವುದು ಗೊತ್ತಿಲ್ಲ. ಆ ದಿನ ನಾವು ಡಯಾನಾ ಟಾಕೀಸ್ ಎದುರುಗಡೆಯ ಹೂವಿನ ಅಂಗಡಿ ಬಳಿ ನಿಂತಿದ್ದೆವು. ರಿಕ್ಷಾ ಸ್ಟ್ಯಾಂಡ್ ಹಿಂದಿನ ರಸ್ತೆಯಿಂದ ಸ್ರದ್ರಿ ವಾಹನ ಇಂದಿರಾನಗರ ಕಡೆಗೆ ಹೋಯಿತು. ನಾವು ಆ ದಿನ ಬೈಸ್ ನಲ್ಲಿ ವಾಹನವನ್ನು ಹಿಂಬಾಲಿಸಿಕೊಂಡು ಹೋಗಿಲ್ಲ. ಕಾರಿನ ಎದುರುಗಡೆ ಮತ್ತು ಹಿಂದುಗಡೆ ಎಷ್ಟು ಜನ ಇದ್ದರು ಗೊತ್ತಿಲ್ಲ. ಆ ದಿನ ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ಈಗ ವಿ.ಸಿ.ಯಲ್ಲಿ ನೋಡಿದ ವ್ಯಕ್ತಿಗಳನ್ನು ವಾಹನದಲ್ಲಿ ನೋಡಿಲ್ಲ. ಆ ದಿನ ಯಾವುದೇ ವಾಹನ ಬಂದಿಲ್ಲ ಎಂದರೆ ಸರಿಯಲ್ಲ. ವಾಹನ ಎಂತಹಾ ವಾಹನ ಗೊತ್ತಿಲ್ಲ, ಅದರ ಬಣ್ಣ ಮತ್ತು ಕಂಪನಿ ಗೊತ್ತಿಲ್ಲ. ಚಾಸಾ1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ನಾನು ಗಸ್ತಿಗೆ ಹೋಗಿಲ್ಲ ಮತ್ತು ಯಾವುದೇ ವಾಹನವನ್ನು ನಮ್ಮ ಮೇಲೆ ಹಾಯಿಸಿಲ್ಲ ಎಂದರೆ ಸರಿಯಲ್ಲ.

**ಉಳಿದ ಆರೋಪಿ ಪರ ವಕೀಲರು ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.